ಪಡೆದಿರತಕ್ಕಂಥ ವ್ಯಕ್ತಿಗಳು. ಅವರಿಗೆ ನಾವು ಸೈಟನ್ನು ಕೊಟ್ಟರೆ ನಾವು ಏನೂ ಕಳೆದುಕೊಳ್ಳುವುದಿಲ್ಲ. ದಯವಿಟ್ಟು ಎಷ್ಟು ಅಪ್ಲಿಕೇಷನ್ಸ್ ಪೆಂಡಿಂಗ್ ಇವೆ; ಎಷ್ಟು ಜನ ಅವಾರ್ಡ್ ವಿನ್ನರ್ಸ್ ಇದ್ದಾರೆ, ಅವರಿಗೆ ಕೂಡಲೇ ಸೈಟ್‌ಗಳನ್ನು ವಿತರಣೆ ಮಾಡಲಿಕ್ಕೆ ತಾವು ಆದೇಶ ಕೊಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್:- ಮಾನ್ಯ ಅಧ್ಯಕ್ಷಣಿಯವರೇ, ನಾನು ಈಗಾಗಲೇ ಹೇಳಿದ್ದೇನೆ; ಸೈಟನ್ನು ಉಚಿತವಾಗಿ ಕೊಡಲು ಸರ್ಕಾರದ ಮುಂದೆ ಯಾವುದೇ ವಿಷಯವಿಲ್ಲ. ಅವರು ಸಲಹೆಯನ್ನು ಕೊಟ್ಟಿದ್ದಾರೆ. ಬಹುಶಃ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಕ್ಯಾಬಿನೆಟ್ ಮುಂದೆ ಈ ವಿಚಾರವನ್ನು ತಂದು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ನಾವು ಅವರ ಸಲಹೆಯನ್ನು ಪರಿಶೀಲನೆ ಮಾಡಿ ಅದರ ಬಗ್ಗೆ ಏನು ಮಾಡಲಿಕ್ಕೆ ಆಗುತ್ತದೆನ್ನುವುದನ್ನು ನೋಡುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಚಿಕ್ಕನಾಯಕನಹಳ್ಳಿ ತಾಲ್ಲೂಕು ಹಂದನಕೆರೆಗೆ ಪೋಲೀಸ್ ಠಾಣೆ ತೆರೆಯುವುದು

(೨೦೯೩) ೪೦೩. ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):- ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕು ಹಂದನಕೆರೆಗೆ ಒಂದು ಪೋಲೀಸ್ ಸ್ಟೇಷನ್ ಆಗತ್ಯವಿರುವುದು ನಿಜವಲ್ಲವೆ, ಹಾಗೂ ಅಲ್ಲಿನ ಅಪರಾಧಗಳ ಸಂಖ್ಯೆ ಹೇರಳವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸದರಿ ವರ್ಷದಲ್ಲಿ ಮಂಜೂರು ಮಾಡುವ ಆಲೋಚನೆ ಏನಾದರೂ ಇದೆಯೇ?

ಇ) ಹಾಗಿದ್ದಲ್ಲಿ ಅಲ್ಲಿನ ಪೋಲೀಸ್ ಸ್ಟೇಷನ್ ಕಾರ್ಯವನ್ನು ಎಂದಿನಿಂದ ಆರಂಭಿಸಲಾಗುವುದು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು):-

ಅ) ಮಾನ್ಯ ಸದಸ್ಯರ ಪ್ರಶ್ನೆಯಿಂದ ಅಗತ್ಯವಿದೆಯೆಂದು ಈಗ ಗಮನಕ್ಕೆ ಬಂದಿದೆ.

ಆ) ಮತ್ತು (ಇ) ಮುಂದಿನ ವರ್ಷಗಳಲ್ಲಿ ಹಂತಹಂತವಾಗಿ ಪೋಲೀಸ್ ಠಾಣೆಗಳನ್ನು ತೆರೆಯವಾಗ ಈ ಸ್ಥಳದ ಅಗತ್ಯತೆಯನ್ನು ಗಮನದಲ್ಲಿಟ್ಟು ಕೊಳ್ಳಲಾಗುವುದು.

ಡಿ. ವೈ. ಎಸ್. ಪಿ. ಯವರ ಕಛೇರಿಯನ್ನು ರಾಮನಗರದಲ್ಲಿ ತೆರೆಯುವುದು

೪೦೮ (೨೧೬೭) ಶ್ರೀ ಸಿ. ಎಂ. ಲಿಂಗಪ್ಪ (ರಾಮನಗರ):- ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಗಾಗ್ಗೆ ಕೋಮುಗಲಭೆ ಮರುಕಳಿಸುವ ರಾಮನಗರಕ್ಕೆ ಒಂದು ಡಿ. ವೈ. ಎಸ್. ಪಿ. ಕಛೇರಿ ಮತ್ತು ರಾಮನಗರದ ಐಜೂರು ಬಡಾವಣೆಗೆ ಒಂದು ಪೋಲೀಸ್ ಠಾಣೆಯನ್ನು ತೆರೆಯಲು ಸರ್ಕಾರ ತೀರ್ಮಾನಿಸಿರುವುದು ನಿಜವೇ?

ಆ) ಹಾಗಿದ್ದಲ್ಲಿ ಇವೆರಡನ್ನೂ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಆಬಕಾರಿ ಸಚಿವರು):-

ಅ) ಸದ್ಯದಲ್ಲಿ ಇಲ್ಲ.

ಆ) ಉದ್ಭವಿಸುವುದಿಲ್ಲ.

ಪ್ಲಾಸ್ಟಿಕ್ ಚೀಲಗಳಲ್ಲಿ ಸಾರಾಯಿ ವಿತರಣೆ ಬಗ್ಗೆ

(೨೨೮೦) ೪೧೭. ಶ್ರೀ ಎಸ್. ಶಫಿ ಅಹಮದ್ (ತುಮಕೂರು):- ಮಾನ್ಯ ಗೃಹ ಮತ್ತು ಆಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧) ಆನಾರೋಗ್ಯದ ದೃಷ್ಟಿಯಿಂದ ಸಾರಾಯಿಯನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ವಿತರಿಸುವ ಕ್ರಮವನ್ನು ತಡೆಯಲು ತೆಗೆದುಕೊಂಡ ಸರ್ಕಾರದ ಕ್ರಮವೇನು?

೨) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾರಾಯಿ ಬಾಟ್ಲಿಂಗ್ ಘಟಕಗಳು ಎಷ್ಟು?

೩) ಮೊಹರಾದ ಸೀಸೆಗಳಲ್ಲಿ ಮತ್ತು ಪ್ಲಾಸ್ಟಿಕ್ ಚೀಲಗಳಲ್ಲಿ ಮಾರಾಟವಾದ ಸಾರಾಯಿಯ ಪ್ರಮಾಣ (ಜಿಲ್ಲಾವಾರು ಮಾಹಿತಿ ಒದಗಿಸುವುದು).

೪) ಈ ಸನ್ನದುಗಳ ನವೀಕರಣದ ಹಂತವನ್ನು ತಿಳಿಸುವುದು.

ಶ್ರೀ ಧರ್ಮಸಿಂಗ್ (ಗೃಹ ಮತ್ತು ಆಬಕಾರಿ ಸಚಿವರು):-

೧) ಸಾರಾಯಿಯನ್ನು ಮೊಹರಾದ ಸೀಸೆಗಳಲ್ಲಿ ವಿತರಿಸುತ್ತಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ. ಈ ಕಾರ್ಯಕ್ರಮ ಮಾನ್ಯ ನ್ಯಾಯ ಮೂರ್ತಿ ಜಸ್ಟೀಸ್ ದೇಸಾಯಿ ಕಮೀಷನ್‌ನವರು ಮಾಡಿರುವ ಶಿಫಾರಸ್ಸುಗಳಲ್ಲಿ ಒಂದು.

೨) ೧೬ ಘಟಕಗಳು ಮತ್ತು ೫ ಡಿಪೋಗಳು.

೩) ಮೊಹರಾದ ಸೀಸೆಗಳಲ್ಲಿ ಮಾರಾಟವಾದ ಸಾರಾಯಿಯ ಮೊತ್ತ:-

ಲೀಟರ್‌ಗಳಲ್ಲಿ

(ಜುಲೈ ನಿಂದ ಜೂನ್) ೧೯೯೦-೯೧ ೭,೪೦,೫೧,೫೧೩
(ಜುಲೈ ರಿಂದ ಜನವರಿ) ೧೯೯೧-೯೨ ೩,೯೭,೨೧,೧೬೦

ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

೪) ಹಾಲಿ ನಡೆಯುತ್ತಿರುವ ಸಾರಾಯಿ ಘಟಕಗಳ ಪರವಾನಗಿ ಅವಧಿಯು ೩೦-೬-೯೨ಕ್ಕೆ ಮುಕ್ತಾಯಗೊಳ್ಳುತ್ತದೆ. ನವೀಕರಣದ ಸಲುವಾಗಿ ಈ ಸಂಬಂಧ ನಿಯಮಗಳ ಅನುಸಾರ ಕ್ರಮ ತೆಗೆದುಕೊಳ್ಳಲಾಗುವುದು.